ತುಳುನಾಡಿನ ದೈವಾರಾಧನೆ : ಜಾನಪದ ಮತ್ತು ಇತಿಹಾಸ

ಲೇಖನ: ಭಾಸ್ಕರ್ ಶೇರಿಗಾರ್ - ಬಾಸ್ಟನ್, ಯು. ಯಸ್. ಏ.

'ಕಾಂತಾರ' ಎಲ್ಲರ ಮನೆ ಮಾತಾಗಿರುವ ಮೂಲತಃ ಕನ್ನಡದಲ್ಲಿ ನಿರ್ಮಿಸಿ ಇತರ ಭಾಷೆಗಳಿಗೆ ಭಾಷಾಂತರಗೊಂಡ ಇತ್ತೀಚಿನ ಒಂದು ಬಹುಭಾಷಾ ಚಲನಚಿತ್ರ. ಈ ಚಲನಚಿತ್ರದ ಪ್ರಮುಖ ಕಥಾವಸ್ತುಗಳು 'ದೈವಾರಾಧನೆ' ಮತ್ತು ಜಾನಪದ ಕ್ರೀಡೆ 'ಕಂಬಳ'. ಈ ಚಲನಚಿತ್ರದ ನಂತರ ದೈವಾರಾಧನೆಯ ಬಗ್ಗೆ ಹೆಚ್ಚು ತಿಳಿಯಲು ಜನರಲ್ಲಿ ಆಸಕ್ತಿ ಮೂಡಿದೆ. 'ತುಳುನಾಡು' ಎಂದು ಕರೆಯಲ್ಪಡುವ ಕರ್ನಾಟಕದ ಕರಾವಳಿಯ ಉಡುಪಿ, ದಕ್ಷಿಣ ಕನ್ನಡ ಹಾಗೂ ಕೇರಳದ ಕಾಸರಗೋಡು ಜಿಲ್ಲೆಗಳಲ್ಲಿ ಮುಖ್ಯವಾಗಿ ಆಚರಿಸಲ್ಪಡುವ 'ದೈವಾರಾಧನೆಯ' ಬಗ್ಗೆ ಸ್ಥೂಲವಾಗಿ ಬೆಳಕು ಚೆಲ್ಲುವ ಒಂದು ಸಣ್ಣ ಪ್ರಯತ್ನ ಇದು. ಪರಶುರಾಮ ೨೧ ಬಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯ ಸಂಹಾರ ಮಾಡಿ, ತಾನು ಜಯಿಸಿದ ಭೂಮಿಯನ್ನು ದಾನ ಮಾಡಿದ ನಂತರ, ತನ್ನ ವಾಸಕ್ಕಾಗಿ, ಗೋಕರ್ಣದಿಂದ ಬೀಸಿ ಎಸೆದ ಕೊಡಲಿ ಬಿದ್ದಷ್ಟು ದೂರದವರೆಗೆ ಸಮುದ್ರ ದೂರ ಸರಿದು, ಉಗಮವಾದ 'ಪರಶುರಾಮ ಸೃಷ್ಟಿಯೇ ' ತುಳುನಾಡು ಎಂದು ಪುರಾಣದಲ್ಲಿ ಉಲ್ಲೇಖವಿದೆ.

ಶಿಕ್ಷಣ, ಬ್ಯಾಂಕಿಂಗ್, ಸಹಕಾರ ಸಂಘಟನೆ, ಹೋಟೆಲ್ ಉದ್ಯಮ, ಕ್ರೀಡೆ, ಧಾರ್ಮಿಕ, ಚಲನಚಿತ್ರ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದು ತನ್ನದೇ ಆದ ಛಾಪು ಹೊಂದಿರುವ ತುಳುನಾಡು ಬಹು ವೈಶಿಷ್ಟ್ಯಗಳ ಬೀಡು. ಯಕ್ಷಗಾನ, ಹುಲಿ ಕುಣಿತದಂತಹ ಕಲೆಗಳಿಂದ ಜಾನಪದ ಹಾಗೂ ಸಾಂಸ್ಕೃತಿಕವಾಗಿ ಅತಿ ಶ್ರೀಮಂತವಾದ ನಾಡು. ಹೊರ ಜಗತ್ತಿಗೆ ಬಂದು ಹೆಚ್ಚು ಪ್ರಸಿದ್ಧಿಗೆ ಬಾರದ ಇತರ ಕಲಾ ಪ್ರಾಕಾರಗಳಾದ ಆಟಿ ಕಳಂಜ, ಕರಂಗೋಲು, ಜೋಗಿ, ಕಂಗೀಲು, ಮಾದಿರಾ, ಗೋಂದುಳು ಇಲ್ಲಿನ ಜಾನಪದ ಹಾಗು ಸಾಂಸ್ಕೃತಿಕ ಹಿರಿಮೆಯನ್ನು ಬಹು ಎತ್ತರಕ್ಕೆ ಕೊಂಡೊಯ್ದಿವೆ. ಕಂಬಳದಂತಹ ಸ್ಪರ್ಧಾತ್ಮಕ ಕ್ರೀಡೆ, ಗ್ರಾಮೀಣ ಪ್ರದೇಶದಲ್ಲಿ ಇನ್ನು ಜೀವಂತವಿರುವ ಚೆನ್ನೆಮಣೆ, ಕುಟ್ಟಿದೊಣ್ಣೆ, ಲಗೋರಿ, ಚೆಂಡಾಟ, ಜುಬುಲಿ, ಕಾಜಿ-ಗೊಬ್ಬು, ಕಕ್ಕೆ-ಗಿಳಿ ಮೊದಲಾದ ಆಟೋಟಗಳು ಇಲ್ಲಿನ ವೈಶಿಷ್ಟ್ಯ.

ತುಳುನಾಡಿನ ಜನರ ಆರಾಧನೆಗಳು ತಮ್ಮದೇ ಆದ ಪೌರಾಣಿಕ, ಜಾನಪದ ಹಾಗು ಐತಿಹಾಸಿಕ ಪರಂಪರೆಯನ್ನು ಹೊಂದಿವೆ. ಉಡುಪಿಯ ಶ್ರೀಕೃಷ್ಣ ದೇವಾಲಯ, ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಾಲಯ, ಕೊಲ್ಲೂರಿನ ಶ್ರೀ ಮೂಕಾಂಬಿಕೆ, ಕಟೀಲಿನ ಶ್ರೀ ದುರ್ಗಾಪರಮೇಶ್ವರಿ ದೇವಾಲಯಗಳು ಭಕ್ತರಿಗೆ ಅಭಯ, ಅನ್ನ, ನ್ಯಾಯದಾನ ಮಾಡುತ್ತಿವೆ. ಇವೆಲ್ಲವನ್ನು ಹೊರತುಪಡಿಸಿ ಇರುವ ವಿಶೇಷವಾದ ಆರಾಧನೆಗಳೆಂದರೆ 'ದೈವಾರಾಧನೆ' ಹಾಗು 'ನಾಗಾರಾಧನೆ'. ಇವು ಮುಖ್ಯವಾಗಿ ಪ್ರಕೃತಿಯ ಆರಾಧನೆಗಳಾಗಿವೆ. ಅನಾದಿ ಕಾಲದಿಂದಲೂ ಮಾನವ ಪ್ರಕೃತಿಯಲ್ಲಿ ಕಂಡು ಬರುವ ತನ್ನ ಅರಿವಿಗೆ ನಿಲುಕದ ಶಕ್ತಿಗಳನ್ನು ವಿವಿಧ ರೂಪಗಳಲ್ಲಿ ಆರಾಧಿಸಿಕೊಂಡು ಬಂದಿದ್ದಾನೆ. ೨೦೦೦ ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸ ಇರುವ ತುಳುನಾಡಿನಲ್ಲಿ ಪಾಲಿಸಿಕೊಂಡು ಬಂದಿರುವ ಆರಾಧನೆಗಳು ಇದಕ್ಕೆ ಹೊರತಾಗಿಲ್ಲ. ಇವು ಬರೀಯ ಆರಾಧನೆಗಳು ಆಗಿರದೆ, ಜೀವನದು ಒಂದು ಅಂಶವಾಗಿ, ಅವಿಭಾಜ್ಯ ಅಂಗವಾಗಿವೆ. ಈ ಆರಾಧನೆಗಳು ಅಕ್ಕ ಪಕ್ಕದ ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಜಿಲ್ಲೆಗಳಲ್ಲಿಯೂ ಕಂಡು ಬರುತ್ತಿದ್ದು, ಹಾಗೂ ತೀರಾ ಇತ್ತೀಚೆಗೆ ಇಲ್ಲಿಂದ ಬೆಂಗಳೂರು ಹಾಗು ಮುಂಬಾಯಿ ಮಹಾನಗರಗಳಿಗೆ ವಲಸೆ ಹೋದ ಜನರು ಅಲ್ಲಿಯೂ ದೈವಾರಾಧನೆಯನ್ನು ಅನುಸರಿಸುತ್ತಿದ್ದಾರೆ.



ದೈವಗಳ ಉಗಮ

ಪ್ರಮುಖವಾಗಿ ಪ್ರಕೃತಿಯ 'ಪಂಚಭೂತ'ಗಳನ್ನು ವಿವಿಧ ರೂಪಗಳಲ್ಲಿ ಪೂಜಿಸುವ ದೈವಾರಾಧನೆಯನ್ನು 'ಭೂತಾರಾಧನೆ' ಎಂದೂ ಕರೆಯುತ್ತಾರೆ. ಸಾಹಿತ್ಯ ಲೋಕದಲ್ಲಿ 'ಭೂತಾರಾಧನೆ', 'ಭೂತ ಕೋಲ' ಎಂಬ ಪದಗಳನ್ನೂ ಉಪಯೋಗಿಸುತ್ತಾರಾದರು ತುಳುನಾಡಿನ ಜನಸಾಮಾನ್ಯರು ಇದನ್ನು 'ದೈವಾರಾಧನೆ',

'ದೈವದ ಕೋಲ', 'ದೈವದ ನೇಮ' ಎಂಬುದಾಗಿ ಸಂಬೋಧಿಸುತ್ತಾರೆ. ಭೂತಾರಾಧನೆಯ ಆರಂಭವನ್ನು ಕಂಡು ಹಿಡಿಯುವುದು ಬಹಳ ಕಷ್ಟದ ಕೆಲಸ. ತುಳುನಾಡಿನಲ್ಲಿ ದೈವಾರಾಧನೆ ಸುಮಾರು ೨೦೦೦ ವರ್ಷಗಳಿಗಿಂತಲೂ ಮೊದಲು ಆಚರಣೆಯಲ್ಲಿ ಇತ್ತು ಎನ್ನುವುದು ತಜ್ಞರ ಅಭಿಮತ. ಇದಕ್ಕೆ ಸರಿಯಾದ ಪುರಾವೆಗಳಿಲ್ಲವಾದರೂ, ಆ ಕಾಲದಲ್ಲಿ ಇಲ್ಲಿಯ ಜನರು ಗ್ರೀಕ್ ಸಾಮ್ರಾಜ್ಯದೊಂದಿಗೆ, ಅರಬ್ ದೇಶಗಳೊಂದಿಗೆ ವ್ಯಾಪಾರ ಸಂಬಂಧಗಳನ್ನು ಹೊಂದಿದ್ದರು, ಗ್ರೀಕ್ ಸಾಹಿತ್ಯದಲ್ಲಿ ಉಲ್ಲೇಖಗೊಂಡಂತೆ ಇಂದಿನ ಉಡುಪಿಯ ಸಮೀಪದ ಉದ್ಯಾವರ ಅಂದಿನ 'ಒಡೊರ' ಎಂಬ ಪ್ರಮುಖ ಬಂದರು ಆಗಿತ್ತು, ಹಾಗೂ ತಮ್ಮದೇ ಆದ ದಾರ್ಮಿಕ ಆಚರಣೆಗಳನ್ನು ಹೊಂದಿದ್ದರು ಎನ್ನುವುದಕ್ಕೆ ಪುರಾವೆಗಳಿವೆ.

ಇಂದು ಆಚರಣೆಯಲ್ಲಿರುವ ರೀತಿ ಹಾಗೂ ಆರಂಭದ ದಿನಗಳಲ್ಲಿ ಇದ್ದಂತಹ ಆಚರಣೆಗಳಿಗೆ ಬಹಳಷ್ಟು ವ್ಯತ್ಯಾಸಗಳಿವೆ. ದೈವಗಳನ್ನು ಕಲ್ಲಿನ ರೂಪದಲ್ಲಿ ಆವಾಹನೆಗೊಳಿಸಿ ಆರಾಧಿಸುವ ಪದ್ಧತಿ ಬಹಳ ಹಿಂದಿನಿಂದಲೂ ಆಚರಣೆಯಲ್ಲಿ ಇತ್ತು. ಇದು ಈಗಲೂ ಗ್ರಾಮೀಣ ಪ್ರದೇಶದಲ್ಲಿ ಕಂಡು ಬರುತ್ತದೆ. ಸಣ್ಣ ಸಣ್ಣ ಗುಡಿಸಲು, ಮನೆಗಳಲ್ಲಿ ವಾಸವಾಗಿದ್ದ ಅಂದಿನ ಜನರು ದೈವಗಳನ್ನು ಗುಡಿಸಲುಗಳಲ್ಲಿ ಆರಾಧಿಸುತ್ತಿದ್ದರು. ಕ್ರಮೇಣ ಮಾನವ ತಾನು ಬೌದ್ಧಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ವಿಕಾಸಗೊಂಡಂತೆ ದೈವಗಳನ್ನು ಸಣ್ಣ ಗುಡಿಗಳಲ್ಲಿ, 'ಸಾನ'ಗಳಲ್ಲಿ ಸ್ಥಾಪಿಸಿ ಆರಾಧಿಸುತ್ತಾ, ಈಗಿರುವ ಆಧುನಿಕ, ವಿಶಾಲವಾದ ದೈವಸ್ಥಾನಗಳಲ್ಲಿ, ಗರಡಿಗಳಲ್ಲಿ ಆರಾಧಿಸುವ ಹಂತಕ್ಕೆ ತಲುಪಿದ್ದಾನೆ.



ಇಲ್ಲಿನ ದೈವಗಳ ಹುಟ್ಟಿನ ಬಗ್ಗೆ ಕೆಲವು ಜಿಜ್ಞಾಸೆಗಳು ಇವೆ. ದೈವ ಹಾಗೂ ದೈವಾರಾಧನೆಯ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ಮಾಡಿರುವ ವಿಧ್ವಾಂಸರ ಪ್ರಕಾರ ಸಾದಾರಣ ೪೦೦ ವಿವಿಧ ರೀತಿಯ ದೈವಗಳ ಆರಾಧನೆಯನ್ನ ತುಳುನಾಡು ಪ್ರದೇಶದಲ್ಲಿ ಕಾಣಬಹುದು. ಪ್ರತಿಯೊಂದು ದೈವದ ಉಗಮದ ಬಗ್ಗೆ ಕೋಲ ಸೇವೆಯ ಸಮಯದಲ್ಲಿ ದೈವ ನರ್ತಕ ಹಾಗೂ ಪರಿಚಾರಕರು 'ಪಾರ್ದನ'ಗಳ ಮೂಲಕ ಹಾಡಿ ಹೇಳುತ್ತಾರೆ. ಅವುಗಳ ಹುಟ್ಟಿನ ಆಧಾರದಲ್ಲಿ ದೈವಗಳನ್ನು ಮೂರು ವಿಧಗಳಲ್ಲಿ ವಿಂಗಡಿಸಬಹುದು.

ಪೌರಾಣಿಕ ಮೂಲದ ದೈವಗಳು:

ಈ ದೈವಗಳು ಶಿವನ ಗಣಗಳ ಪ್ರತಿರೂಪ ಎನ್ನುವ ಕೆಲವು ವಾದಗಳಿವೆ, ಹೆಚ್ಚಿನವುಗಳು ಶಿವನ ಗಣಗಳ ಹೆಸರನ್ನೂ ಹೋಲುತ್ತವೆ. ಆದರೆ ಈ ಪಂಗಡಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಹಾಗು ಆದಿಮಾಯೆ-ಆದಿಶಕ್ತಿಯ ಪ್ರತಿರೂಪ, ಅಂಶದಿಂದ ಹುಟ್ಟಿದ ದೈವಗಳು ಇವೆ. ವಿಷ್ಣುಮೂರ್ತಿ, ಲಕ್ಕೇಸಿರಿ, ಉಲ್ಲಾಳ್ತಿ, ಧೂಮಾವತಿ, ಪಿಲಿಚಾಮುಂಡಿ, ಬ್ರಮ್ಮೈರ್, ಜುಮಾದಿ, ವೈದ್ಯನಾಥ ಮೊದಲಾದ ಹೆಸರಿನ ದೈವಗಳು ತ್ರಿಮೂರ್ತಿಗಳ, ಆದಿಮಾಯೆಯ ಅವತಾರ ದೈವಗಳಾಗಿವೆ.

ಪ್ರಾಣಿ - ಪ್ರಕೃತಿಜನ್ಯ ದೈವಗಳು:

ಮನುಷ್ಯ ಪ್ರಕೃತಿಯೊಂದಿಗೆ ಸಹಬಾಳ್ವೆ ನಡೆಸಿ ಸಮತೋಲನವನ್ನು ಕಾಯ್ದುಕೊಂಡು ಅನಾದಿ ಕಾಲದಿಂದಲೂ ಜೀವನ ನಡೆಸಿಕೊಂಡು ಬಂದಿದ್ದಾನೆ. ಪ್ರಕೃತಿ ವಿಕೋಪಗೊಂಡಾಗ, ಪ್ರಾಣಿಗಳ ಕಾಟ ತನ್ನಿಂದ ನಿಯಂತ್ರಿಸಲು ಸಾಧ್ಯವಾಗದೆ ಇದ್ದಾಗ, ಅವನ್ನು ಆರಾಧಿಸುವ ಕ್ರಮ ಇದ್ದದ್ದು ಪ್ರಪಂಚದ ಎಲ್ಲಡೆ ಕಂಡು ಬರುವ ಸಾಮಾನ್ಯ ವಿಷಯ. ತುಳುನಾಡಿನಲ್ಲಿ ಇಂತಹ ಶಕ್ತಿಗಳನ್ನು ಪಿಲಿಭೂತ, ಮೈಸಂದಾಯ, ಪಂಜುರ್ಲಿ, ಅಣ್ಣಪ್ಪ ಪಂಜುರ್ಲಿ, ನಾಗ, ಗುಡ್ಡೆದಭೂತ, ಶಿರಾಡಿ ಭೂತ, ಮಲೆರಾಯ ಇತ್ಯಾದಿ ಹೆಸರಿನಿಂದ ಆರಾಧಿಸುತ್ತ ಬಂದಿದ್ದಾರೆ.

ಮನುಷ್ಯಜನ್ಯ ದೈವಗಳು:

ಅಸಾಧಾರಣ ಶಕ್ತಿ, ಕೌಶಲ್ಯ, ಚಾತುರ್ಯಗಳನ್ನು ಪ್ರದರ್ಶಿಸಿದ ಜನ ಸಾಮಾನ್ಯರನ್ನು ಇತಿಹಾಸದಲ್ಲಿ ನಾವು ಬಹಳಷ್ಟು ಸಾರಿ ಕೇಳಿ ಅಥವಾ ಓದಿ ತಿಳಿದಿದ್ದೇವೆ. ಈ ಪಂಗಡದಲ್ಲಿ ಬರುವಂತಹ ದೈವಗಳು ಇಂತಹ ಅಸಾಧಾರಣ ಶಕ್ತಿ ಪ್ರದರ್ಶಿಸಿ, ದೈವ-

ದೇವರಿಗೆ ಸರಿ ಸಮನಾದ ಕೆಲಸಗಳನ್ನು ಮಾಡಿ ದೈವತ್ವವನ್ನು ಪಡೆದವರು. ಈ ದೈವಗಳ ಕಥೆಯಲ್ಲಿ ಬರುವ ಒಂದು ಮುಖ್ಯ ಅಂಶ ಎಂದರೆ, ದೈವತ್ವವನ್ನು ಪಡೆದ ಈ ಜನರು ಒಂದಲ್ಲ ಒಂದು ರೀತಿಯ ದುರಂತಮಯ ಅಂತ್ಯವನ್ನು ಕಂಡಿದ್ದಾರೆ. ಕೋಟಿ-ಚೆನ್ನಯ, ಸತ್ಯನಾಪುರತ ಸಿರಿ, ಕಲ್ಕುಡ-ಕಲ್ಲುರ್ಟಿ, ಕಾಂತಬಾರೆ-ಬುದಬಾರೆ, ಕೊರಗ-ತನಿಯ, ಬೊಬ್ಬರ್ಯ, ಜಾರಂದಾಯ ಮೊದಲಾದ ದೈವಗಳು ಮನುಷ್ಯಜನ್ಯ ದೈವಗಳು.

ಆರಾಧನೆಯ ರೀತಿಗಳು

ಇದೊಂದು ಅನಾದಿ ಕಾಲದಿಂದ ಅಸ್ಥಿತ್ವದಲ್ಲಿರುವ ನಂಬಿಕೆ, ವೇಷ ಭೂಷಣ, ನಾಟ್ಯ, ಸಂಗೀತ, ಸಾಹಿತ್ಯ, ಚಾಣಾಕ್ಷ ಮಾತುಗಾರಿಕೆ, ಪಾರ್ದನ ಪಠನ, ಮೊದಲಾದ ಆಚರಣೆಗಳ ಬಹು ಸಂಕೀರ್ಣವಾದ ವಿಶಿಷ್ಟವಾದ ಸಮ್ಮಿಲನ. ದೈವಾರಾಧನೆ ಎಲ್ಲಿ ಹಾಗು ಹೇಗೆ ಆಚರಿಸಲ್ಪಡುತದೆ ಎನ್ನುವುದನ್ನು ಆಧಾರವಾಗಿ ಇಟ್ಟುಕೊಂಡು ಸ್ಥೂಲವಾಗಿ ಕೋಲ, ನೇಮ ಮತ್ತು ತಂಬಿಲ ಎಂಬುದಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು.



ಕೋಲ:

ಭೂತಕೋಲ ಅಥವಾ ದೈವಕೋಲವು ಹೆಚ್ಚಾಗಿ ಒಂದು ಗ್ರಾಮದ ಅಥವಾ ಬೌಗೋಳಿಕ ಚೌಕಟ್ಟಿನ ಒಳಗೆ ಅಲ್ಲಿನ ಅಧಿದೈವ - ಅಧಿದೇವತೆಯ ಉತ್ಸವವಾಗಿ ಆಚರಿಸಲಾಗುತ್ತದೆ. ಈ ಆರಾಧನೆಗಳಿಗೆ ಗುತ್ತುಮನೆ, ಮಾಗಣೆ, ಗ್ರಾಮ, ಬೀಡು ಹಾಗೂ ತಾವು ಮಾಡುತ್ತಿರುವ ಕಸುಬು ಮೊದಲಾದುವುಗಳನ್ನು ಅವಲಂಭಿಸಿ ಪ್ರತಿಯೊಬ್ಬರಿಗೂ ತಮ್ಮದೇ ಆದಂತಹ ಪೂರ್ವ ನಿರ್ಧರಿತವಾದ ಕೆಲಸಗಳಿವೆ. ಮಾಗಣೆ, ಗ್ರಾಮ ಮೊದಲಾದ ಭೌಗೋಲಿಕ ಪರಿಮಿತಿಯ ಒಳಗಡೆ 'ಕೋಲ' ನಡೆಯುವ ನಿರ್ದಿಷ್ಟವಾದ, ಗುರುತಿಸಲ್ಪಟ್ಟ, ಪವಿತ್ರವಾದ ಜಾಗವನ್ನು 'ದೈವದ ಸಾನ' ಅಥವಾ 'ದೈವದ ಸ್ಥಾನ' ಎಂದು ಕರೆಯುತ್ತಾರೆ. ಜನರು ಜಾತಿ-ಮತ, ಮೇಲು ಕೀಳು ಎಂಬುದನ್ನು ಮರೆತು ತಮಗೆ ನಿರ್ದಿಷ್ಟಪಡಿಸಿದ ಕೆಲಸಗಳನ್ನು ಬಹಳ ಶ್ರದ್ಧೆಯಿಂದ ನೆರವೇರಿಸುತ್ತಾರೆ. ದೈವದ ಕೋಲ ಪ್ರತಿ ವರ್ಷ ಒಂದು ನಿರ್ದಿಷ್ಟ ಪಡಿಸಿದ ದಿನದಂದು ನಡೆಯುತ್ತದೆ. ಜನರು ತಮ್ಮ ಇತರ ಕೌಟುಂಭಿಕ ಕಾರ್ಯಕ್ರಮಗಳನ್ನ ಕೋಲದ ದಿನಗಳನ್ನು ತಪ್ಪಿಸಿ ಆಯೋಜನೆ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಜನರು ತಮ್ಮ ಇಷ್ಟಾರ್ಥದಂತೆ ಹರಕೆಯ, ವಿಶೇಷವಾದ ದೈವಕೋಲವನ್ನು ಕೂಡ ನಡೆಸುತ್ತಾರೆ. ಕೋಲ ಸಮಯದಲ್ಲಿ ದೈವವನ್ನು ರಥ, ಬಂಡಿಗಳಲ್ಲಿ ಮೆರವಣಿಗೆಯಲ್ಲಿ ಸಾಗಿಸುವ ಪದ್ಧತಿಗಳು ಕೂಡ ಕೆಲವು ಕಡೆ ಇದೆ.

ನೇಮ:

'ನೇಮ' ಆಚರಣೆಯು ಒಂದು ಕುಟುಂಬದ ಒಳಗೆ ನಡೆಯುವ ಖಾಸಗಿ ದೈವಕೋಲ. ಇದರಲ್ಲಿ ಕುಟುಂಬದ ಪ್ರತಿಯೊಬ್ಬ ಸದಸ್ಯರು ಭಾಗವಹಿಸುತ್ತಾರೆ. ಆಚರಣೆಯಲ್ಲಿ ಕೋಲ ಮತ್ತು ನೇಮಗಳ ನಡುವೆ ಜಾಸ್ತಿ ವ್ಯತ್ಯಾಸ ಕಂಡು ಬರುವುದಿಲ್ಲ. ಕುಟುಂಬದ ಸದಸ್ಯರು ತಮ್ಮ ಕಷ್ಟಗಳನ್ನು ದೈವದ ಮುಂದಿಡುತ್ತಾರೆ. ದೈವವು ಕುಟುಂಬ ಕಲಹಗಳನ್ನು ಬಗೆಹರಿಸಿ ನ್ಯಾಯವನ್ನು ನೀಡುತ್ತದೆ. ನೇಮಗಳು ಕುಟುಂಬದ ಘನತೆ, ಆರ್ಥಿಕ ಅನುಕೂಲತೆ ಮೊದಲಾದುದನ್ನು ಅವಲಂಬಿಸಿ, ಪ್ರತಿ ವರ್ಷ, ಎರಡು ವರ್ಷಕ್ಕೊಮ್ಮೆ, ಅಥವಾ ಕೆಲವು ವರ್ಷಗಳಿಗೊಮ್ಮೆ ನಡೆಯುತ್ತವೆ. ನೇಮೋತ್ಸವಕ್ಕೆ ಹೆಚ್ಚಿನ ಖರ್ಚು-ವೆಚ್ಚಗಳಿರುವುದರಿಂದ, ಆರ್ಥಿಕವಾಗಿ ಸುಧೃಡವಾದ, ಶ್ರೀಮಂತ ಕುಟುಂಬಗಳು ಮಾತ್ರ ಇದನ್ನು ಆಚರಿಸುತ್ತವೆ.

ತಂಬಿಲ:

ತಂಬಿಲ ಕುಟುಂಬದ ಸದಸ್ಯರೆಲ್ಲರೂ ಸೇರಿಕೊಂಡು ಮಾಡುವಂತಹ ಒಂದು ದೈವ ಆರಾಧನೆ. ಕೋಲ ಹಾಗು ನೇಮಗಳಲ್ಲಿ ಕಂಡು ಬರುವ 'ದೈವನರ್ತನ' ತಂಬಿಲದಲ್ಲಿ ಇರುವುದಿಲ್ಲ. ದೈವಗಳನ್ನು ತಮ್ಮ ಮನೆಯ ಒಂದು ಕೋಣೆಯಲ್ಲಿ, ಪ್ರತ್ಯೇಕ ಗುಡಿಗಳಲ್ಲಿ, ಕಟ್ಟೆಗಳನ್ನು ಕಟ್ಟಿ ಅಥವಾ ಮನೆಗಿಂತ ದೂರದಲ್ಲಿ ಮರ ಗಿಡಗಳಿಂದ ತುಂಬಿದ ಪ್ರಶಾಂತವಾದ 'ಬನ'ಗಳಲ್ಲಿ ನೆಲೆಗೊಳಿಸಿ ಆರಾಧಿಸುತ್ತಾರೆ. ಇದರಲ್ಲಿ ಕೋಳಿಯಂತಹ ಪ್ರಾಣಿಬಲಿ ಸಾಮಾನ್ಯವಾದರೂ, ಬೂದು ಕುಂಬಳಕಾಯಿ ಅರ್ಪಿಸಿ ಆರಾಧಿಸುವ ಪರಿಪಾಠವು ಇದೆ.

ದೈವಾರಾಧನೆಯ ನಡೆ ಮತ್ತು ಸ್ವರೂಪ

ದೈವಾರಾಧನೆಯ 'ನಡೆ' - ಆರಂಭದಿಂದ ಅಂತ್ಯದವರೆಗೆ ಏನೆಲ್ಲ ನಡೆಯುತ್ತದೆ ಎಂಬುದನ್ನು ಸವಿವರವಾಗಿ ತಿಳಿಸುವುದು ತುಂಬಾ ಕಷ್ಟ, ಇಲ್ಲಿ ಪ್ರಸುತಪಡಿಸಿರುವ ವಿಷಯ ಸಂಕ್ಷಿಪ್ತವಾದುದು. ದೈವಕೋಲ ಅಥವಾ ನೇಮ ಸೇವೆ ಹಲವು ನಿರ್ದಿಷ್ಟಪಡಿಸಿದ ಜಾಗ, ವಸ್ತುಗಳು, ಸಮಯ, ಜನ ಮುಂತಾದವುಗಳ ಒಟ್ಟುಸೇರಿಕೆಯಿಂದ ನಡೆಯುತ್ತದೆ. ಮನುಷ್ಯ ಹಾಗು ದೈವಗಳು ಒಟ್ಟು ಸೇರಲು ಒಂದು 'ಜೋಗ - ಮಾಯಾ' ಎನ್ನುವ ವಾಸ್ತವ-ಅವಾಸ್ತವಗಳು ನಡುವಿನ ಮಧ್ಯಂತರ ಜಗತ್ತನ್ನು ಸೃಷ್ಟಿ ಮಾಡಬೇಕಾಗುತ್ತದೆ. ಇದನ್ನು ಸಾದಾರಣವಾಗಿ ಗ್ರಾಮದ ಹೊರವಲಯದಲ್ಲಿರುವ ದೈವಗಳ 'ಸಾನ'ವನ್ನು ಚಪ್ಪರ ಹಾಕಿ ಶೃಂಗರಿಸಿ ತಯಾರು ಮಾಡಲಾಗುತ್ತದೆ. ದೈವ ನರ್ತಕನನ್ನು ಇತರ ಜನರಿಂದ ಬೇರ್ಪಡಿಸಿ, ನಿಗದಿಪಡಿಸಿದ ವೇಷಭೂಷಣ, ಸಮಯ, ಆಚರಣೆಗಳನ್ನು ಮಾಡಿದಾಗ ಮಾತ್ರ ದೈವ ಆವಾಹನೆಯಾಗಿ ದರ್ಶನ ನೀಡುತ್ತದೆ. ಈ ದೈವನರ್ತಕರನ್ನು, ನಲಿಕೆ, ಪಾಣಾರ, ಪರವ, ಪಂಬದ ಮೊದಲಾದ ಹೆಸರಿನಿಂದ ಸಂಬೋಧಿಸುತ್ತಾರೆ.

ಕೋಲದ ಸಮಯದಲ್ಲಿ ಉಪಯೋಗಿಸುವ ದೈವದ ಮಣಿ, ಖಡ್ಗ, ತಲೆಮಣಿ, ಗಗ್ಗರ, ತಲೆಕಟ್ಟು, ಚೌರ, ಮುಖವಾಡ, ಎದೆಪಟ್ಟಿ ಮೊದಲಾದ ಬೆಳ್ಳಿಯ ವಸ್ತುಗಳನ್ನು 'ಭಂಡಾರ' ಎಂದು ಕರೆಯುತ್ತಾರೆ. ಇದನ್ನು ಗ್ರಾಮದ ಹಿರಿಯ ಅಥವಾ ಗುತ್ತಿನ ಮನೆಯಲ್ಲಿ ಸುರಕ್ಷತೆಯ ದೃಷ್ಟಿಯಿಂದ ಇಡಲಾಗುತ್ತದೆ. ಕೋಲದ ದಿನ ಅಥವಾ ಮೊದಲು, ಊರ ಹಿರಿಯರು ಸೇರಿ ಇವುಗಳನ್ನು ಹೊರತೆಗೆಯುವ ಕಾರ್ಯಕ್ಕೆ 'ಭಂಡಾರ ಇಳಿಸುವುದು' ಎನ್ನುತ್ತಾರೆ. 'ಭಂಡಾರ ಇಳಿಸುವ' ಮೂಲಕ ಕೋಲದ ಪ್ರಕ್ರಿಯೆ ಆರಂಭವಾಗುತ್ತದೆ. ಕೋಲದ ದಿನ ಆಚರಣೆಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ತಯಾರು ಮಾಡಲಾಗುತ್ತದೆ. ರಾತ್ರೆ ದೈವಕ್ಕೆ ಪೂಜೆ ಸಲ್ಲಿಸಿ, ಕೋಲಕಟ್ಟುವ ದೈವನರ್ತಕರಿಗೆ 'ಎಣ್ಣೆ ಬೂಳ್ಯ' ಕೊಟ್ಟು ಆಹ್ವಾನಿಸುವುದರ ಮೂಲಕ ಕೋಲದ ಪ್ರಕ್ರಿಯೆ ಆರಂಭವಾಗುತ್ತದೆ. ಪ್ರತಿಯೊಂದು ದೈವಕ್ಕೂ ಅದರ ಹುಟ್ಟು, ಗುಣಗಳನ್ನು ಆಧರಿಸಿ ತನ್ನದೇ ಆದ ಮುಖವರ್ಣಿಕೆ, ಆಯುಧ, ತಲೆಮುಡಿ, ಅಣಿ, ವೇಷ ಭೂಷಣಗಳಿವೆ. ವೇಷಭೂಷಣದಲ್ಲಿ ಕಂಡು ಬರುವ ವಿಶೇಷತೆ ಎಂದರೆ, ಶೃಂಗಾರಕ್ಕೆ ಉಪಯೋಗಿಸುವ ಸ್ಥಳೀಯವಾಗಿ ಸಿಗುವ ಎಳೆಯ ತೆಂಗಿನಗರಿ ಮತ್ತು ಅಡಿಕೆಯ ಹೂವು 'ಪಿಂಗಾರ'. ದೈವದ ಹುಟ್ಟು ಹಾಗೂ ನಡೆದುಬಂದ ಹಾದಿ, ಮಾಡಿರುವ ಸಾಧನೆಗಳನ್ನ ಬಣ್ಣಗಾರಿಕೆ, ವೇಷ ಧರಿಸುವ ಸಮಯದಲ್ಲಿ 'ಪಾರ್ದನ'ದ ಮೂಲಕ ಹೇಳಿ ದೈವನರ್ತಕನನ್ನು ಮಾನಸಿಕವಾಗಿ ಸಿದ್ಧ ಮಾಡಲಾಗುತ್ತದೆ. ದೈವದ ಭಂಡಾರ, 'ಚರ್ವ', 'ಕೋಲ್ತಿರಿ', ಹಣ್ಣುಕಾಯಿ ಮೊದಲಾದುವುಗಳನ್ನು 'ಕೊಡಿಯಡಿ' ಆಗಿ 'ಮುಕ್ಕಳಿಗೆ'ಯ ಮೇಲೆ ದೈವ ಸೇವೆ ನಡೆಯುವ ಚಪ್ಪರದ ನಡುವೆ ಇಡಲಾಗುವುದು. ಕೆಲವು ಕೋಲಗಳಲ್ಲಿ ದೈವ ಹಾಗು ಜನರ ನಡುವಿನ ಸಂಭಾಷಣೆಯನ್ನು 'ದೈವ ಪಾತ್ರಿ' ನಿಭಾಯಿಸುತ್ತಾರೆ. ಕಂಚಿನ 'ಗಗ್ಗರ'ಗಳನ್ನು ಕಾಲಿಗೆ ಕಟ್ಟುವ ಪ್ರಕ್ರಿಯೆಯ ನಂತರ ದೈವದ ಅವಾಹನೆಯ ಕುರುಹುಗಳು ಕಾಣುತ್ತವೆ.

ಕೋಲದ ಸಂಪೂರ್ಣ 'ನಡೆ'ಯನ್ನು ಪೂರ್ವಾರ್ಧ ಹಾಗು ಅಪರಾರ್ಧ ಎಂದು ವಿಂಗಡಿಸಬಹುದು. ಪೂರ್ವಾರ್ಧದಲ್ಲಿ ವಾದ್ಯ ಸಂಗೀತದ ಅಬ್ಬರದಲ್ಲಿ, ದೈವ ತನ್ನ ಇರುವಿಕೆ, ಆಗಮನವನ್ನು ರೌದ್ರ ರೂಪದಲ್ಲಿ ತೋರ್ಪಡಿಸುತ್ತದೆ. ಅಪರಾರ್ಧದಲ್ಲಿ ಶಾಂತಗೊಂಡು, ತನಗೆ ಪೂಜೆ, ಆರಾಧನೆ ಸಲ್ಲಿಸಿದ್ದುದಕ್ಕೆ ಸಂತೋಷ ವ್ಯಕ್ತಪಡಿಸಿ, 'ನಂಬಿದವರಿಗೆ ಇಂಬು ಕೊಟ್ಟು, ನಂಬದವರನ್ನು ನಂಬಿಸುವಂತೆ' ಮಾಡವುದಾಗಿ ಅಭಯ ನೀಡುತ್ತದೆ. ಇದೇ ಸಂದರ್ಭದಲ್ಲಿ ತನ್ನ ಭಕ್ತರಿಗೆ ಬಂದಿರುವ ಸಂಕಷ್ಟ, ಅಹವಾಲುಗಳನ್ನು ಆಲಿಸಿ ಪರಿಹಾರದ, ನ್ಯಾಯದಾನದ 'ನುಡಿಕಟ್ಟನ್ನು' ನೀಡುತ್ತದೆ. ದೈವದ ನುಡಿಕಟ್ಟನ್ನು ಯಾರೂ ನಿರ್ಲಕ್ಷಿಸುವಂತಿಲ್ಲ. ಸೇವೆಯಿಂದ ಸಂತೃಪ್ತಗೊಂಡ ದೈವ ಕೊನಗೆ ದೈವನರ್ತಕನ ದೇಹವನ್ನು ಬಿಟ್ಟು 'ಜೋಗ'ದಿಂದ - 'ಮಾಯಾ'ಕ್ಕೆ ಸೇರಿಕೊಳ್ಳುತ್ತದೆ. ಇಲ್ಲಿ ವಿವರಿಸಲಾದ 'ನಡೆ' ಎಲ್ಲಾ ದೈವಗಳ ಕೋಲಗಳಲ್ಲಿ ಕಂಡುಬರುವ ಸಾಮಾನ್ಯ ವಿಷಯ. ಇದನ್ನು ಹೊರತುಪಡಿಸಿ, ದೈವಗಳನ್ನಾಧರಿಸಿ ಕೆಲವು ಸಣ್ಣಪುಟ್ಟ ವ್ಯತ್ಯಾಸಗಳನ್ನು ಸಹ ಕಾಣಬಹುದು.

ಜಾನಪದ ಸ್ವರೂಪ

ದೈವಾರಾಧನೆಯಲ್ಲಿ ಕೆಲವು ಜಾನಪದ ಅಂಶಗಳು ಒಳಗೊಂಡಿವೆ, ಆದರೂ ಇದನ್ನು ಸಂಪೂರ್ಣವಾಗಿ ಜಾನಪದ ಕಲೆಯಾಗಿ ವಿಂಗಡಿಸಲು ಸಾಧ್ಯವಿಲ್ಲ. ಇದು ಜನರ ಜೀವನದ ಒಂದು ಅಂಶ ಹಾಗೂ ಅವಿಭಾಜ್ಯ ಅಂಗ. ಬಹು ಕಾಲದಿಂದಲೂ ದೈವಗಳು ಜನರ ದೈನಂದಿನ ವಿಚಾರಗಳಲ್ಲಿ ಒಂದು ರೀತಿಯಲ್ಲಿ ಕುಟುಂಬದ ಅಗೋಚರ ಸದಸ್ಯರಾಗಿ, ಗ್ರಾಮದ ರಕ್ಷಕರಾಗಿ ಒಳಿತು ಕೆಡುಕುಗಳನ್ನು ತಿಳಿಹೇಳಿ, ನ್ಯಾಯಯುತ, ಸಾರ್ಥಕ ಧರ್ಮದ, ಜೀವನ ನಡೆಸುವಲ್ಲಿ ಬಹಳ ಸಹಕಾರಿಯಾಗಿವೆ. ಜನರು ದೈವದ 'ನುಡಿ'ಯನ್ನು ಮೀರಿ ಹೋಗುವಂತಿಲ್ಲ.



ದೈವದ ಸೇವೆ ನಡೆಯುವಾಗ ಆ ದೈವದ ಹುಟ್ಟು, ನಡೆದು ಬಂದ ದಾರಿ, ತೋರಿದ ಸಾಹಸ, ತನ್ನ ಸಾಮರ್ಥ್ಯ ಏನೆಂಬುದನ್ನು ಹಾಡಿನ ಮೂಲಕ ನಿವೇದಿಸಲ್ಪಡುತ್ತದೆ. ಈ ಹಾಡನ್ನು 'ಪಾರ್ದನ', 'ಸಂದಿ', 'ಬೀರ' ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಪ್ರತಿಯೊಂದು ದೈವಕ್ಕೂ ತನ್ನದೇ ಆದ ವಿಶಿಷ್ಟವಾದ ಪಾರ್ದನವಿದೆ. ಪಾರ್ದನಗಳು ವಂಶ ಪಾರಂಪರಿಕವಾಗಿ ಬಾಯಿಂದ ಬಾಯಿಗೆ ಹರಿದು ಬಂದು ಇನ್ನು ಜೀವಂತವಾಗಿವೆ. ಒಂದು ದೈವದ ಸೇವೆಯನ್ನು ಬೇರೆ ಬೇರೆ ಕುಟುಂಬದ ದೈವನರ್ತಕರು, ಬೇರೆ ಬೇರೆ ಜಾಗಗಳಲ್ಲಿ ಏಕಕಾಲದಲ್ಲಿ ನೆರವೇರಿಸುವ ಸಂದರ್ಭಗಳಿವೆ. ಈ ಕುಟುಂಬಗಳು ಒಂದಕ್ಕೊಂದು ಸಂಪರ್ಕದಲ್ಲಿ ಇರದಿದ್ದರೂ, ಪಾರ್ದನಗಳಲ್ಲಿ ವ್ಯತ್ಯಾಸ ಕಂಡು ಬರುವುದಿಲ್ಲ. ತನ್ನತನ ಹಾಗೂ ಮೂಲ ಸ್ವರೂಪವನ್ನು ಕಾಪಾಡಿಕೊಂಡು ಬಂದಿದೆ. ತೀರಾ ಇತೀಚೆಗೆ ಪಾರ್ದನಗಳನ್ನು ದಾಖಲಿಕರಿಸುವ ಕೆಲವು ಪ್ರಯತ್ನಗಳು ನಡೆದಿವೆ. ಸುಮಾರು ೪೦೦ ರಷ್ಟು ಇರುವ ದೈವಗಳ ಪಾರ್ದನಗಳನ್ನು ನೆನಪಿಟ್ಟು ತಮ್ಮಿಂದ ಮಕ್ಕಳಿಗೆ, ಮಕ್ಕಳಿಂದ ಮೊಮ್ಮಕ್ಕಳಿಗೆ ವ್ಯವಸ್ಥಿತವಾಗಿ ಪಸರಿಸಿ ಉಳಿಸಿಕೊಂಡಿರುವುದು ಒಂದು ಪವಾಡವೇ ಸರಿ. ಈ ಪರಿಪಾಠ ಹಾಗು ಕೆಲವು ಆಚರಣೆಯ ರೀತಿ ರಿವಾಜುಗಳು ದೈವಕೋಲದ ಜಾನಪದ ರೂಪವನ್ನು ತೋರಿಸುತ್ತದೆ. ಆಚರಣೆಯ ವಿಧಿವಿಧಾನಗಳು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಹೋದಂತೆ ಹೆಚ್ಚಿನ ಬದಲಾವಣೆ ಕಂಡು ಬರುವುದಿಲ್ಲ. ದೈವನರ್ತಕರ ಮಕ್ಕಳು, ಅವರ ಕುಟುಂಬದ ಇತರ ಮಕ್ಕುಳು ದೈವ ಕೋಲದ ಸಮಯದಲ್ಲಿ ಸಣ್ಣ ಪುಟ್ಟ ಕೆಲಸಗಳಿಂದ ಹಿಡಿದು ಮುಖ್ಯವಾದ ಕೆಲಸಗಳಲ್ಲಿಯೂ ತಮ್ಮನ್ನು ಒಳಪಡಿಸಿಕೊಂಡು ಇರುತ್ತಾರೆ. ಇಲ್ಲಿ ನಡೆಯುವ ಆಚರಣೆಗಳಿಗೆ ಯಾವುದೇ ಲಿಖಿತ ದಾಖಲೆಗಳಿಲ್ಲ, ಇಡೀ ಕುಟುಂಬ ಹಾಗೂ ವಿಸ್ತೃತ ಕುಟುಂಬ ದೈವಕೋಲದ ತಯಾರಿ ಹಾಗೂ ಆಚರಣೆಗಳಲ್ಲಿ ಪಾಲ್ಗೊಳ್ಳುವುದರಿಂದ, ಈ ಕಲೆ ವಂಶ ಪಾರಂಪರಿಕವಾಗಿ ಹರಿದು ಜೀವಂತವಾಗಿದೆ.



ಇತಿಹಾಸ

ದೈವಾರಾಧನೆ ಬಗ್ಗೆ ಇತಿಹಾಸದಲ್ಲಿರುವ ಉಲ್ಲೇಖಗಳು ಬಹು ವಿರಳ. ತುಳುನಾಡನ್ನು ಆಳುಪ ರಾಜವಂಶ ಸುಮಾರು ೧೨೦೦ ವರ್ಷಗಳ ವರೆಗೆ ಕ್ರಿ. ಶ. ೨ನೇ ಶತಮಾನದಿಂದ ಕ್ರಿ. ಶ. ೧೫ನೇ ಶತಮಾನದವರೆಗೆ 'ಆಳ್ವಖೇಡ' ಹೆಸರಿನಿಂದ ಸುದೀರ್ಘವಾಗಿ ಆಳಿದ ಲಿಖಿತ ದಾಖಲೆಗಳಿವೆ. ೨ನೇ ಶತಮಾನದ ಪ್ರಸಿದ್ಧ ರೋಮನ್ ಭೂಗೋಳ ಶಾಸ್ತ್ರಜ್ಞ ಟಾಲೆಮಿಯು ಇದನ್ನು 'ಓಲೋಖೋಯ್ರ' ಎಂದು ಗುರುತಿಸಿದ್ದಾನೆ. ಆಳುಪ ವಂಶದ ಪ್ರಸಿದ್ಧ ರಾಜ 'ಭೂತಾಳ ಆಳುಪ ಪಾಂಡ್ಯ' ಜಾರಿಗೆ ತಂದ 'ಅಳಿಯಕಟ್ಟು' ಸಂಪ್ರದಾಯ ಕೆಲವು ದೈವಗಳ ಆರಾಧನೆಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಸುಮಾರು ೧೨ನೇ ಶತಮಾನದಲ್ಲಿ ಭೂತಾಳ ಪಾಂಡ್ಯ ಆಡಳಿತ ನಡೆಸಿದ್ದಾನೆ ಎಂದು ಇತಿಹಾಸ ಹೇಳುತ್ತದೆ. ಕೆಲವು ಇತಿಹಾಸ ತಜ್ಞರು ಭೂತಾಳ ಪಾಂಡ್ಯನ ಕಾಲವನ್ನು ಕ್ರಿ. ಶ. ಮೊದಲನೆಯ ಶತಮಾನವೆಂದು ಪ್ರತಿಪಾದಿಸುತ್ತಾರೆ. ಇದಕ್ಕಿಂತಲೂ ಸಾವಿರಾರು ವರ್ಷಗಳ ಮೊದಲೇ ದೈವಾರಾಧನೆ ಪ್ರಚಲಿತವಿತ್ತು ಎನ್ನುವುದು ತಜ್ಞರ ಅಭಿಮತ.

ಶ್ರೀಕ್ಷೇತ್ರ ಧರ್ಮಸ್ಥಳದ ಆರಾಧ್ಯದೈವ ಶ್ರೀ ಮಂಜುನಾಥ ಸ್ವಾಮಿಯನ್ನು ಸ್ಥಾಪನೆ ಮಾಡಿದ ಅಣ್ಣಪ್ಪ, ಅಣ್ಣಪ್ಪ ಪಂಜುರ್ಲಿ ದೈವವಾಗಿ ಧರ್ಮಸ್ಥಳದಲ್ಲಿ ನೆಲೆ ನಿಂತು ಅಭಯವನ್ನು ನೀಡುತಿದ್ದಾನೆ. ಪಂಜುರ್ಲಿ ದೈವದ ಪಾರ್ದನದಲ್ಲಿ

ಉಲ್ಲೇಖಿಸಿದಂತೆ ಹಂದಿಯ ಮರಿಯೇ (ಪಂಜಿದ ಕುರ್ಲೆ - ಪಂಜುರ್ಲಿ) ಈ ಅಣ್ಣಪ್ಪ ಪಂಜುರ್ಲಿ ದೈವ. ಶ್ರೀಕ್ಷೇತ್ರ ಧರ್ಮಸ್ಥಳದ ಈಗಿನ ಧರ್ಮಾಧಿಕಾರಿ ಪದ್ಮ ವಿಭೂಷಣ ಡಾ. ಶ್ರೀ ವೀರೇಂದ್ರ ಹೆಗ್ಗಡೆ ಅವರು ೨೧ನೆಯ ಧರ್ಮಾಧಿಕಾರಿ. ಒಂದು ಲೆಕ್ಕಾಚಾರದಂತೆ ೨೧ ತಲೆಮಾರುಗಳ ಹಿಂದೆ ಸುಮಾರು ೯೦೦ ರಿಂದ ೧೦೦೦ ವರ್ಷದ ಹಿಂದೆ ಈ ಘಟನೆ ನಡೆದಿರುವ ಸಾಧ್ಯತೆ ಇದೆ. ಇದು ದೈವಾರಾಧನೆಯ ಇರುವಿಕೆಯ ಕುರಿತಾಗಿ ಸುಮಾರು ಹತ್ತನೆಯ ಶತಮಾನದಲ್ಲಿ ನಡೆದಂತಹ ಘಟನೆಯ ಇನ್ನೊಂದು ಸ್ಪಷ್ಟ ಇತಿಹಾಸ.

ಜನಪದೀಯವಾಗಿ ಹರಿದು ಬಂದ ಪಾರ್ದನಗಳಲ್ಲಿ ಕಂಡು ಬರುವ ವಿವಿಧ ರೀತಿಯ ದೈವಗಳ ಉಗಮ, ನೆಲೆ ಹಾಗೂ ಇತರ ಉಲ್ಲೇಖಗಳಲ್ಲಿ ಕೆಲವನ್ನು ಇತಿಹಾಸದಲ್ಲಿಯೂ ನೋಡಬಹುದು. ಇದಕ್ಕೊಂದು ಸ್ಪಷ್ಟ ನಿದರ್ಶನ ಅಂದರೆ ಕಲ್ಕುಡ-ಕಲ್ಲುರ್ಟಿ ದೈವಗಳ ಪಾರ್ದನದಲ್ಲಿ ಬರುವ ಘಟನೆಗಳು ಹಾಗೂ ಇತಿಹಾಸದಲ್ಲಿ ದಾಖಲಾಗಿರುವ ಘಟನೆಗಳು.

ಪಾರ್ದನದಲ್ಲಿ ಬರುವಂತೆ ಕಾರ್ಕಳದ ಶ್ರೀ ಗೋಮಟೇಶ್ವರ ಮೂರ್ತಿಯನ್ನು ಮೂಡಬಿದಿರೆಯ ಸಮೀಪದ ಮಾರ್ನಾಡ್ ಎಂಬ ಗ್ರಾಮದ ಶಿಲ್ಪಿ ಶಂಬು ಕಲ್ಕುಡ ಕಾರ್ಕಳದ ರಾಜ ಭೈರ ಅರಸರ ಅಣತಿಯಂತೆ ಕೆತ್ತುತ್ತಾನೆ. ಮೂಡಬಿದಿರೆಯ ಸಮೀಪದ ವೇಣೂರಿನ ಅಜಿಲ ಅರಸರು, ತಮಗೂ ವೇಣೂರಿನಲ್ಲಿ ಇಂತಹ ಗೋಮೆಟೇಶ್ವರ ಮೂರ್ತಿಯನ್ನು ಕೆತ್ತುವ ಇಚ್ಛೆಯನ್ನು ವ್ಯಕತಪಡಿಸಿದರು. ಕಾರ್ಕಳದಲ್ಲಿರುವ ಗೋಮಟೇಶ್ವರ ಮೂರ್ತಿಗಿಂತ ಮಿಗಿಲಾದ ಮೂರ್ತಿ ವೇಣೂರಿನಲ್ಲಿ ಇರಬಾರದು ಎಂದು ಭೈರರಸ, ಶಿಲ್ಪಿ ಶಂಬು ಕಲ್ಕುಡನ ಒಂದು ಕೈ ಹಾಗೂ ಒಂದು ಕಾಲನ್ನು ಕತ್ತರಿಸುತ್ತಾನೆ. ಛಲ ಬಿಡದ ಶಂಬು ಕಲ್ಕುಡ ಒಂದು ಕೈ ಹಾಗು ಒಂದು ಕಾಲಿನಿಂದ ವೇಣೂರಿನಲ್ಲಿ ಭವ್ಯವಾದ ಶ್ರೀ ಗೋಮಟೇಶ್ವರ ಮೂರ್ತಿಯ ಕೆತ್ತನೆಯನ್ನು ಆರಂಭಿಸುತ್ತಾನೆ. ಇದನ್ನರಿತ ಭೈರರಸ ಕಲ್ಕುಡನಿಗೆ ವಿವಿಧ ರೀತಿಯ ಹಿಂಸೆ ನೀಡುತ್ತಾನೆ. ತುಂಬಾ ಸಮಯದವರೆಗೆ ಬಾರದ ಅಣ್ಣ ಕಲ್ಕುಡನನ್ನು ಹುಡುಕುತ್ತ ಬಂದ ತಂಗಿ ಕಲ್ಲುರ್ಟಿ, ಅಣ್ಣನಿಗಾದ ಅನ್ಯಾಯಕ್ಕೆ ಭೈರರಸನ್ನಲ್ಲಿ ಪರಿಹಾರವನ್ನು ಕೇಳುತ್ತಾಳೆ. ಭೈರರಸ ಇಬ್ಬರಿಗೂ ವಿವಿಧ ಹಿಂಸೆ ನೀಡುತ್ತಾನೆ. ಕೊನೆಗೆ ಹಿಂಸೆ ತಾಳಲಾರದೆ ಅಣ್ಣ-ತಂಗಿ ಭಾವಿಗೆ ಬಿದ್ದು ಮಾಯವಾಗಿ ದೈವಗಳಾಗುತ್ತಾರೆ. ದೈವಗಳಾಗಿ ಭೈರರಸನ ಮೇಲೆ ಸೇಡನ್ನು ತೀರಿಸುತ್ತಾರೆ. ಕೊನೆಗೆ ಭೈರರಸರು ತಮ್ಮ ತಪ್ಪಿನ ಅರಿವಾಗಿ ಅರಮನೆಯಲ್ಲಿ ಕಲ್ಕುಡ-ಕಲ್ಲುರ್ಟಿಯನ್ನು ಸ್ಥಾಪಿಸಿ ಆರಾಧಿಸಲು ಆರಂಭಿಸುತ್ತಾರೆ. ಈ ಆರಾಧನೆ ಈಗಲೂ ನಡೆಯುತ್ತಿದೆ.

ಕಾರ್ಕಳದ ವೀರಪಾಂಡ್ಯ ಭೈರರಸರು ಕ್ರಿ.ಶ. ೧೪೩೨ ರಲ್ಲಿ ಶ್ರೀ ಗೋಮಟೇಶ್ವರ ಮೂರ್ತಿಯನ್ನು ಪತಿಷ್ಠಾಪಿಸಿದರು ಹಾಗೂ ವೇಣೂರಿನ ಗೋಮಟೇಶ್ವರ ಮೂರ್ತಿಯನ್ನು ಕ್ರಿ. ಶ. ೧೬೦೪ ಶಂಭು ಕಲ್ಕುಡನ ಮಗ ವೀರ ಕಲ್ಕುಡ ಕೆತ್ತನೆಯನ್ನು ಸಂಪೂರ್ಣಗೊಳಿಸಿದ ಎಂದು ಇತಿಹಾಸದಲ್ಲಿ ದಾಖಲಾಗಿರುವ ವಿಷಯ.

ಪಾರ್ದನದಲ್ಲಿ ಬರುವ ಸತ್ಯನಾಪುರದ ರಾಜಕುಮಾರಿ 'ಸಿರಿ', ಸಿರಿಯಾ ಮಗ ಕುಮಾರ, ಮಗಳು ಸೊನ್ನೆ, ಮೊಮಕ್ಕಳು ಅಬ್ಬಗ-ದಾರಗ ಇವರು ದೈವಗಳಾದ ಕಥೆಯು ಬಹಳ ರೋಚಕವಾದುದು. ಇದು ಸಾದಾರಣ ೧೫ನೆಯ ಶತಮಾನದ ಅಂತ್ಯದಲ್ಲಿ ನಡೆಯಿತು ಎಂದು ಇತಿಹಾಸಕಾರರು ಕರಾರುವಕ್ಕಾಗಿ ಅಂದಾಜಿಸಿದ್ದಾರೆ.

ಕೆಲವು ಇತಿಹಾಸಕಾರರ ಪ್ರಕಾರ ಅತಿ ಹೆಚ್ಚು ಸಮಯ ರಾಜ್ಯಭಾರ ಮಾಡಿದ ವಂಶ 'ಆಳುಪ ವಂಶ'. ಕ್ರಿ. ಪು. ೩ನೇ ಶತಮಾನದಿಂದ ೧೭೯೯ ರಲ್ಲಿ ಬ್ರಿಟಿಷರು ತುಳುನಾಡನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸುವವರೆಗೆ ಆಳುಪರು ಹೆಚ್ಚಿನ ಸಮಯ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಕೆಳದಿ ಮೊದಲಾದ ರಾಜರ ಸಾಮಂತರಾಗಿ ಹಾಗು ಸ್ವತಂತ್ರವಾಗಿ ರಾಜ್ಯಬಾರ ನಡೆಸಿದರು. ಸಾಂಸ್ಕೃತಿಕವಾಗಿ ಈಗಲೂ ಅಳುಪರ ಆಡಳಿತದ ಕುರುಹು ಇದೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರ ತುಳುನಾಡಿನಲ್ಲಿ ಸ್ವತಂತ್ರ ಸಣ್ಣ ರಾಜ್ಯಗಳು, ಬೀಡು, ಸೀಮೆಗಳು ಹುಟ್ಟಿಕೊಂಡವು. ೧೭ನೇ ಶತಮಾನದಲ್ಲಿ ಇಂತಹ ಒಂದು ಸೀಮೆ (ಸಣ್ಣ ರಾಜ್ಯ) ಯಲ್ಲಿ ಕೋಟಿ-ಚೆನ್ನಯ ಸಹೋದರರು ಹುಟ್ಟಿ ಮೆರೆದು ದುರಂತ ಸಾವನ್ನು ಕಂಡು ದೈವಗಳಾದರು.



ಜಾನಪದದಲ್ಲಿ ಬರುವ ವಿಷಯಗಳು ಇತಿಹಾಸದಲ್ಲಯೂ ದಾಖಲಾಗಿರುವ ಇಂತಹ ಬಹಳಷ್ಟು ನಿದರ್ಶನಗಳು ಇವೆ.

ಶೈಕ್ಷಣಿಕ ಸಂಶೋಧನೆ

ದೈವಾರಾಧನೆಯ ಬಗ್ಗೆ ಶೈಕ್ಷಣಿಕವಾಗಿ ಅನ್ಯದೇಶೀಯರು ಮಾಡಿರುವ ಅಧ್ಯಯನ-ಸಂಶೋಧನೆ ನಾವು ಮಾಡಿರುವ ಸಂಶೋಧನೆಗಳಿಗಿಂತ ತುಂಬಾ ಜಾಸ್ತಿ ಎನ್ನಬಹುದು. ಇಲ್ಲಿ ಉಲ್ಲೇಖಿಸಲಾದ ದಾಖಲೆಗಳು ಕೇವಲ ಕೆಲವು ಮಾತ್ರ. ದೈವಾರಾಧನೆಯ ಮೊದಲ ದಾಖಲೀಕರಣ ಮಾಡಿರುವುದು ೧೮೩೪ರಲ್ಲಿ ಮಂಗಳೂರಿಗೆ ಬಂದ ಜರ್ಮನಿಯ ಬಾಸೆಲ್ ಮಿಷನ್. ಅದರ ರೆವೆರೆಂಡ್ ಎ. ಮನ್ನಾರ್ ಪಾರ್ದನಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಬ್ರಿಟಿಷ್ ಆಡಳಿತಾಧಿಕಾರಿ, ಸಂಸ್ಕೃತ ಹಾಗೂ ದ್ರಾವಿಡ ಭಾಷಾ ತಜ್ಞ ಎ. ಸಿ. ಬರ್ನೆಲ್ ದೈವಾರಾಧನೆಯ ಕುರಿತು ಸಂಶೋಧನಾತ್ಮಕ ಗ್ರಂಥ ರಚಿಸಿ ೧೮೭೪ ರಲ್ಲಿ ಪ್ರಕಟಿಸಿದ್ದಾರೆ.

ಸ್ವಾತಂತ್ಯಪೂರ್ವ ಭಾರತದಲ್ಲಿ ಹಾಗು ಆನಂತರ ದೈವಗಳು, ಪಾರ್ದನಗಳ ವಿಷಯದಲ್ಲಿ ಸಾರಸ್ವತ ಲೋಕದಲ್ಲಿ ಸಾಕಷ್ಟು ಚರ್ಚೆ, ಸಂಶೋಧನೆ ನಡೆದಿದೆ. ಭಾರತೀಯ ಹಾಗೂ ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ದೈವಾರಾಧನೆ ಬಗ್ಗೆ ಸಂಶೋಧನೆಗೆ ಇತ್ತೀಚೆಗೆ ಹೆಚ್ಚಿನ ಆಸಕ್ತಿ ಕಂಡು ಬರುತ್ತಿದೆ. ಮಂಗಳೂರು ವಿಶ್ವವಿದ್ಯಾನಿಲಯದ ಪ್ರೊ.ಅಮೃತ್ ಸೋಮೇಶ್ವರ, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಪೂರ್ವ ಉಪ ಕುಲಪತಿಗಳಾದ ಡಾ. ಬಿ. ಎ. ವಿವೇಕ ರೈ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಹಾವೇರಿಯಾ ಪೂರ್ವ ಉಪ ಕುಲಪತಿಗಳಾದ ಡಾ. ಚಿನ್ನಪ್ಪ ಗೌಡ, ನಿಟ್ಟೆ ವಿಶ್ವವಿದ್ಯಾನಿಲಯದ ಡಾ. ಸಾಯಿಗೀತ ಇವರೆಲ್ಲ ತಮ್ಮ ಪಿ.ಹೆಚ್.ಡಿ ಮಹಾಪ್ರಬಂಧಗಳನ್ನು ಭೂತಾರಾಧನೆಯ ವಿಷಯಗಳಲ್ಲಿ ಸಂಶೋಧನೆ ನಡೆಸಿ ಮಂಡಿಸಿದ್ದಾರೆ. ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ ಮಟ್ಟದಲ್ಲಿ ದೈವಾರಾಧನೆಯ ವಿಷಯದಲ್ಲಿ ಸಂಶೋಧನೆ ನಡೆಸಿದವರು ಬಹಳಷ್ಟು ಮಂದಿ, ಅವರಲ್ಲಿ ಫಿನ್ಲ್ಯಾಂಡಿನ ಹೆಲ್ಸಿಂಕಿ ವಿಶ್ವವಿದ್ಯಾನಿಲಯದ ಪ್ರೊ. ಲೋರಿ ಹಾಂಕೊ, ಪ್ರೊ. ಅನೇಲಿ ಹಾಂಕೊ, ಅಮೆರಿಕಾದ ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವೆರ್ಸಿಟಿಯ ಪ್ರೊ. ಪೀಟರ್ ಕ್ಲಾಸ್ ಮುಂಚೂಣಿಯಲ್ಲಿ ಇರುವವರು. ತೀರಾ ಇತೀಚೆಗೆ ೨೦೧೯ ರಲ್ಲಿ ಜರ್ಮನಿಯ ವುರ್ಜ್ ಬರ್ಗ್ ವಿಶ್ವವಿದ್ಯಾನಿಲಯದ ಡಾ.ಪೌಲಿನ್ ಸ್ಲಟ್ಟುರ್ ಅವರು 'ತುಳುನಾಡ ಸಿರಿ' ಬಗೆಗಿನ ಸಂಶೋಧನೆಗೆ ಹಾಗು ಪುಣೆಯ ತಿಲಕ್ ಮಹಾರಾಷ್ಟ್ರ ವಿದ್ಯಾಪೀಠದ ಡಾ. ಶಿಲ್ಪಾ ಸೋನಾವಣೆ ಅವರು ದೈವಾರಾಧನೆಯ ವಿಷಯದಲ್ಲಿ ಸಂಶೋಧನೆ ನಡೆಸಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ.

ಈ ಸಂಶೋಧನೆಗಳ ವಿಷಯದಲ್ಲಿ ಅತ್ಯಂತ ಮಹತ್ವವಾದುದು 'ಸತ್ಯನಾಪುರತ ಸಿರಿ' ಪಾರ್ದನದ ದಾಖಲೀಕರಣ. ಪ್ರಸಿದ್ಧ ಗ್ರೀಕ್ ಕವಿ ಹೋಮರ್ ಸಂಪಾದಿಸಿದ ಮಹಾಕಾವ್ಯ 'ಇಲಿಯೆಡ್' ಹಾಗು 'ಒಡೆಸ್ಸಿ', ಫಿನ್ಲ್ಯಾಂಡಿನ ಮಹಾಕಾವ್ಯ 'ಕಳೆವಾಲ' ಮೊದಲಾದುವು 'ಸತ್ಯನಾಪುರದ ಸಿರಿ' ಅಂತಹ ಬಾಯಿಂದ ಬಾಯಿಗೆ ಹರಿದು ಬಂದಂತಹ ಜಾನಪದ ಮಹಾಕಾವ್ಯಗಳು. 'ಸಿರಿ' ಪಾರ್ದನದಲ್ಲಿ ೧೫೬೮೭ ಸಾಲುಗಳ ಪದ್ಯರೂಪದ ಸಾಹಿತ್ಯವಿದೆ. ಇದು ಇಲಿಯೆಡ್ ಗಿಂತ ೬ ಸಾಲು ಕಡಿಮೆ ಹಾಗೂ ಅಂತಹ ಮಹಾಗ್ರಂಥಗಳ ಸಾಲಿಗೆ ಸೇರುತ್ತದೆ. ಇದನ್ನು ಡಾ.ವಿವೇಕ್ ರೈ, ಡಾ.ಲೋರಿ ಹಾಂಕೊ, ಡಾ. ಅನೇಲಿ ಹಾಂಕೊ ಅವರು ಸಂಪಾದಿಸಿ ಮೂರು ಸಂಪುಟಗಳ ಮಹಾಕಾವ್ಯವನ್ನು ಪ್ರಕಟಿಸಿದ್ದಾರೆ. ಜಾನಪದ ಕಲಾವಿದ 'ಸಿರಿ' ಆರಾಧಕ ಗೋಪಾಲ ನಾಯ್ಕ್ ಅದನ್ನು ೯ ದಿನಗಳ ಕಾಲ ಹಾಡಿ ದಾಖಲಿಸಿದ್ದಾರೆ.

ಜರ್ಮನಿ, ಫಿನ್ಲ್ಯಾಂಡ್, ಯುಗೊಸ್ಲಾವಿಯ, ರಷ್ಯಾ, ಯು.ಯಸ್.ಎ, ಜಪಾನ್, ಹಾಗೂ ಯೂರೋಪಿನ ಇತರ ವಿಶ್ವವಿದ್ಯಾಲಯಗಳು, ನಮ್ಮದೇ ಆದ ಮಂಗಳೂರು ವಿಶ್ವವಿದ್ಯಾನಿಲಯ, ಮಣಿಪಾಲ ವಿಶ್ವವಿದ್ಯಾನಿಲಯ, ಹಾವೇರಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಆಂದ್ರಪ್ರದೇಶದ ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯಗಳು ದೈವಾರಾಧನೆಯ ವಿಷಯದಲ್ಲಿ ಸಂಶೋಧನೆಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿವೆ.



ವಿಶ್ವದಾದ್ಯಂತ ಆರಾಧನೆ

ತುಳುನಾಡಿನಲ್ಲಿ ಕಂಡು ಬರುವ ದೈವಾರಾಧನೆಯ ರೀತಿಯ ಆರಾಧನೆ ಭಾರತದಾದ್ಯಂತ ಇದ್ದರು, ಇಲ್ಲಿಯ ಅಚರಣೆ ತುಂಬಾ ವಿಶಿಷ್ಟವಾದುದು. ಇದರಲ್ಲಿ ಜನರ ದೈವೀಕತೆ, ಭಕ್ತಿ, ಭಯ, ಶ್ರದ್ಧೆ ವಿಶೇಷವಾಗಿ ಕಾಣಬರುವುದು. ಕೇರಳದಲ್ಲಿರುವ 'ತೆಯ್ಯಮ್', ಶ್ರೀಲಂಕಾದಲ್ಲಿರುವ 'ಯಕ್ಷ' ಆಚರಣೆಗಳಲ್ಲಿ ಸಾಮ್ಯತೆಯನ್ನು ಕಾಣಬಹುದು. ಅದೇ ರೀತಿ ಪ್ರಾಚೀನ ನಾಗರಿಕತೆಗಳು ಬೆಳೆದಂತಹ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಒಂದಲ್ಲ ಒಂದು ರೀತಿಯ ಪ್ರಕೃತಿ ಪೂಜೆಯ, ದೈವಾರಾಧನೆಯನ್ನು ಕಾಣಬಹುದು.

ಮಾನವ ತಾನೆಷ್ಟು ಬೆಳೆದರು, ಆಧುನಿಕತೆ ಹೊಂದಿದರೂ ಕೂಡ ತನ್ನ ಮೂಲ ನಂಬಿಕೆಗಳನ್ನು, ಪ್ರಕೃತಿಯೊಂದಿಗಿನ ಸಹಬಾಳ್ವೆಯನ್ನು ಎಂದೂ ಮರೆಯುವುದಿಲ್ಲ ಎನ್ನುವುದಕ್ಕೆ ತುಳುನಾಡಿನ ದೈವಾರಾಧನೆಯೇ ಒಂದು ಸಾಕ್ಷಿ.

ಆಕರ:

- ಅಂತರ್ಜಾಲ, ವಿಕಿಪೀಡಿಯಾ, ಯೂಟ್ಯೂಬ್
- ಡಾ. ಅಮೃತ್ ಸೋಮೇಶ್ವರ, ಡಾ. ಬಿ. ಎ. ವಿವೇಕ್ ರೈ, ಡಾ. ಚಿನ್ನಪ್ಪ ಗೌಡ, ಡಾ. ಸಾಯೀಗೀತ, ಡಾ. ಗೌರಿ ನಾಯ್ಡು, ಡಾ. ಶಿಲ್ಪ ಸೋನಾವಣೆ ಅವರ ಲೇಖನಗಳು, ಪುಸ್ತಕಗಳು, ಸಂದರ್ಶನಗಳು.
- ಚಿತ್ರಪಟಗಳ ಹಕ್ಕು ಅದರ ಮಾಲಕರದ್ದು.